**ದಿನಾಂಕಃ 04-06-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಎದುರುಗಾರರ ಪರವಾಗಿ ಶ್ರೀ ಎಸ್.ಆರ್.ಎಚ್ ವಕೀಲರಿಂದಃ**

ನನಗೆ ಬಸವ್ವ ಇವರ ಪರಿಚಯ 20-25 ವರ್ಷಗಳಿಂದ ಇತ್ತು. ನಮ್ಮ ಮಶೀನ್ ಕೆಟ್ಟರೆ 1 ನೇ ಎದುರುಗಾರರ ಗಂಡನ ಹತ್ತಿರ ರಿಪೇರಿಗಾಗಿ ಹೋಗುತ್ತಿದ್ದೆ ಆದ್ದರಿಂದ ಬಸವ್ವ ಇವರ ಪರಿಚಯವಾಗಿರುತ್ತದೆ. ಬಸವ್ವ ಇವರು ಅಶೋಕ ಇವರ ಮನೆಯಲ್ಲಿ ಇರುತ್ತಿದ್ದರೇ ಎಂಬ ಪ್ರಶ್ನೆಗೆ ಸಾಕ್ಷಿ ನೆಲೋಗಲ್‌ದಲ್ಲಿ ಇರುತ್ತಿದ್ದರು ಎಂದು ಉತ್ತರಿಸುತ್ತಾರೆ. ಅಶೋಕ ಇವರ ಅಂಗಡಿ ಹಾವೇರಿಯ ಮೈಲಾರ ಮಹದೇವಪ್ಪ ವೃತ್ತದ ಬಳಿ ಇತ್ತು. ನಾನು ಬಸವ್ವ ಇವರ ಸಂಬಂಧಿಕನಲ್ಲ. ನನಗೆ ಶಾಂತಪ್ಪ ಇವರ ಪರಿಚಯವಿಲ್ಲ. ಇತ್ತೀಚೆಗೆ ಶಾಂತಪ್ಪ ಇವರ ಪರಿಚಯವಾಗಿದೆ. ಈಗ 2 ವರ್ಷಗಳಿಂದ ಅವರ ಪರಿಚಯವಾಗಿದೆ. ಶಾಂತಪ್ಪ ಇವರ ಪರಿಚಯ ನನಗೆ ನ್ಯಾಯಾಲಯದಲ್ಲಿ 2 ವರ್ಷಗಳ ಹಿಂದೆ ಆಗಿರುತ್ತದೆ. ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ನಾನು ಎರಡು ವರ್ಷಗಳ ಹಿಂದೆ ನ್ಯಾಯಾಲಯಕ್ಕೆ ಬಂದಿದ್ದೆ. ನನಗೆ ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ಸಮನ್ಸ್ ಬಂದಿರಲಿಲ್ಲ ಸಾಕ್ಷ್ಯನುಡಿಯಲು ಬರುವಂತೆ ನಮ್ಮ ವಕೀಲರಾದ ಶ್ರೀ ಪಿ.ಎಂ.ಬೆನ್ನೂರ ವಕೀಲರು ಹೇಳಿದ್ದರು. ನನಗೆ ಶ್ರೀ ಪಿ.ಎಂ.ಬೆನ್ನೂರ ವಕೀಲರ ಪರಿಚಯ ಕಳೆದ 20 ವರ್ಷಗಳಿಂದ ಇದೆ. ನನ್ನ ಅಕ್ಕ ಮತ್ತು ನನ್ನ ತಂದೆ ತಮ್ಮ ಪ್ರಕರಣಗಳನ್ನು ಶ್ರೀ ಎಸ್.ಆರ್ ನೆಲವಿಗಿ ವಕೀಲರಿಗೆ ಕೊಡುತಿದ್ದರು ಆಗ ನಾನು ಕೂಡ ಅವರ ಜೊತೆ ಹೋಗುತ್ತಿದ್ದೆ ಆದ್ದರಿಂದ ಶ್ರೀ ಪಿ.ಎಂ.ಬೆನ್ನೂರ ವಕೀಲರ ಪರಿಚಯವಾಗಿರುತ್ತದೆ. ಶ್ರೀ ಪಿ.ಎಂ.ಬೆನ್ನೂರ ವಕೀಲರು ನ್ಯಾಯವಾಧಿ ವೃತ್ತಿ ಮಾಡಲು ಪ್ರಾರಂಭಿಸಿ 20 ವರ್ಷ ಆಗಿಲ್ಲ ಎಂದರೆನಾನು ಶ್ರೀ ಎಸ್.ಆರ್. ನೆಲವಿಗಿ ವಕೀಲರ ಬಳಿ 20 ವರ್ಷಗಳಿಂದ ಹೋಗುತ್ತಿದ್ದೆ ಎಂದು ಸಾಕ್ಷಿ ಉತ್ತರಿಸುತ್ತಾರೆ. ಮೃತ್ಯು ಪತ್ರಕ್ಕೆ ಸಾಕ್ಷ್ಯ ಹಾಕಲು ಶ್ರೀ ಎಸ್.ಆರ್. ನೆಲವಿಗಿ ವಕೀಲರು ಹೇಳಿದರೋ ಅಥವಾ ಶ್ರೀ ಪಿ.ಎಂ.ಬೆನ್ನೂರ ವಕೀಲರು ಹೇಳಿದರೋ ಎಂಬ ಪ್ರಶ್ನೆಗೆ ಸಾಕ್ಷಿ ಬಸಮ್ಮ ಇವರು ಹೇಳಿದರು ಎಂದು ಉತ್ತರಿಸುತ್ತಾರೆ. ಬಸಮ್ಮ ಇವರು 20.12.2010 ರಂದು ಮೃತ್ಯುಪತ್ರಕ್ಕೆ ಸಾಕ್ಷಿ ಎಂದು ಸಹಿ ಮಾಡಲು ಬರುವಂತೆ ಹೇಳಿದರು.

ಆ ದಿವಸ ಮುಂಜಾನೆ 9.00 ಗಂಟೆಗೆ ನೆಲವಿಗಿ ವಕೀಲರ ಮನೆಗೆ ಬರುವಂತೆ ಹೇಳಿದ್ದಳು. ಮಾಳಾಪುರದ ಗುಡ್ಡಪ್ಪ ಎನ್ನುವವರು ನನ್ನನ್ನು ಕರೆಯಲು ಬಂದಿದ್ದರು. ಗುಡ್ಡಪ್ಪ ಇವರು ಬಸಮ್ಮ ಇವರ ಮಗಳ ಗಂಡ. ನಾನು ಆ ದಿವಸ ಮುಂಜಾನೆ 10.00 ಗಂಟೆಗೆ ನೆಲವಿಗಿ ವಕೀಲರ ಮನೆಗೆ ಹೋದೆ. ನಾನು ಅಲ್ಲಿಗೆ ಹೋದಾಗ ಬಸಮ್ಮ, ನೆಲವಿಗಿ ವಕೀಲರು, ಶ್ರೀ ಪಿ.ಎಂ.ಬೆನ್ನೂರ ವಕೀಲರು ಹಾಗೂ ಗುಡ್ಡಪ್ಪ ಇವರಿಷ್ಟೆ ಜನರು ಹಾಜರಿದ್ದರು. ನಾನು ನೆಲವಿಗಿ ವಕೀಲರ ಮನೆಯಲ್ಲಿ ಸುಮಾರು ಅರ್ಧ ಗಂಟೆಯವರೆಗೆ ಇದ್ದೆ. ನಾನು ನೆಲವಿಗಿ ವಕೀಲರ ಮನೆಗೆ ಹೋದಾಗ ಮೃತ್ಯುಪತ್ರವನ್ನು ಬರೆದಿರಲಿಲ್ಲ ಮೃತ್ಯುಪತ್ರವನ್ನು ಬಿಳಿ ಹಾಳೆಯ ಮೇಲೆ ಬರೆದಿರುತ್ತಾರೆ. ಮೃತ್ಯುಪತ್ರ 2 ಪುಟಗಳಷ್ಟು ಇರುತ್ತದೆ. ಬಸಮ್ಮ ಇವರಿಗೆ ಅರ್ಧಾಂಗ ವಾಯು ಆಗಿತ್ತು ಎಂದರೆ ಸರಿಯಲ್ಲ. ಬಸಮ್ಮ ಇವಳು ನನ್ನ ಹತ್ತಿರ ಹಾಗೂ ಶ್ರೀ ಪಿ.ಎಂ.ಬೆನ್ನೂರ ವಕೀಲರ ಹತ್ತಿರ ತನಗೆ ಅರ್ಧಾಂಗ ವಾಯು ಆದ ಬಗ್ಗೆ ಹೇಳಿಲ್ಲ ಹಾಗೂ ಮೃತ್ಯುಪತ್ರದಲ್ಲಿ ಬರೆಸಿಲ್ಲ ಮೃತ್ಯುಪತ್ರವನ್ನು ಬಸವೇಶ್ವರ ನಗರದ ಆಸ್ತಿಯ ಬಗ್ಗೆ ಮಾಡಿದ್ದಾರೆ ಆ ಆಸ್ತಿಯ ಸಂಖ್ಯೆ ಗೊತ್ತಿಲ್ಲ. ಆಸ್ತಿಯ ಸಂಖ್ಯೆಯನ್ನು ಮೃತ್ಯುಪತ್ರದಲ್ಲಿ ಬರೆದಿದ್ದಾರೆ ಮೃತ್ಯುಪತ್ರದಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಮಾಹಿತಿ ಇದೆ. ಮೃತ್ಯುಪತ್ರವನ್ನು ಆಕೆಯ ಆಸ್ತಿಯ 1/3 ಭಾಗದ ಬಗ್ಗೆ ಮಾಡಿರುತ್ತಾಳೆ. ಬಸಮ್ಮ ಇವರು ನ್ಯಾಯಾಲಯದಲ್ಲಿ ಪ್ರಕರಣ ಇದೆ ಆ ಆಸ್ತಿಯಲ್ಲಿ ನನಗೆ 1/3 ಅಂಶ ಭಾಗ ಇದೆ. ಆ ಆಸ್ತಿ ನನ್ನ ನಂತರ ಶಾಂತಕುಮಾರ ಇವರಿಗೆ ಹೋಗಬೇಕು ಎಂದು ಮಾಹಿತಿ ನೀಡಿದರು ಅದರಂತೆ ಮೃತ್ಯುಪತ್ರವನ್ನು ಬಿಳಿಹಾಳೆಯ ಮೇಲೆ ಬರೆದಿದ್ದರು ಮೃತ್ಯುಪತ್ರದಲ್ಲಿ ಇಷ್ಟೇ ವಿಷಯ ಇದೆ

ಆ ದಿನ ನಾನು ನೆಲವಿಗಿ ವಕೀಲರ ಮನೆಯಿಂದ ನಮ್ಮ ಮನೆಗೆ ಬಂದಿರುತ್ತೇನೆ. ಬಸವ್ವ ಇವರು ಶಾಂತಪ್ಪ ಇವರ ಹೆಸರಿನಲ್ಲಿ ಮೃತ್ಯುಪತ್ರ ಮಾಡಿಕೊಟ್ಟರು ಮತ್ತು ಆ ಮೃತ್ಯುಪತ್ರಕ್ಕೆ ಸಾಕ್ಷಿದಾರನೆಂದು ಸಹಿ ಮಾಡಲು ನನ್ನನ್ನು ಕರೆದಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಸಮ್ಮ ಇವರು ನೀಡಿದ ಮಾಹಿತಿಯ ಮೇರೆಗೆ ಅವರ ಸಮಕ್ಷಮ ಶ್ರೀ ಪಿ.ಎಂ.ಬೆನ್ನೂರ ವಕೀಲರು ಮೃತ್ಯುಪತ್ರವನ್ನು ಬರೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ಬಸವ್ವ ಇವರಿಗೆ ಅರ್ಧಾಂಗ ವಾಯು ಆಗಿತ್ತು ಆದ್ದರಿಂದ ಅವರಿಗೆ ಓಡಾಡುವ ಮತ್ತು ಯೋಚನೆ ಮಾಡುವ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ.

ಬಸವ್ವ ಇವರಿಗೆ ಶ್ರೀ ಪಿ.ಎಂ.ಬೆನ್ನೂರ ವಕೀಲರಿಗೆ ಮಾಹಿತಿ ಕೊಡುವಷ್ಟು ಸಾಮರ್ಥ್ಯ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ನೆಲವಿಗಿ ವಕೀಲರಿಗೆ ಪ್ರಕರಣ ಕೊಡುತ್ತಿದ್ದೆ ಆದ್ದರಿಂದ ಅವರು ಮೃತ್ಯುಪತ್ರವನ್ನು ಸೃಷ್ಟಿಸಿ ಅದಕ್ಕೆ ನನ್ನ ಸಹಿ ಹಾಕಿಸಿದ್ದಾರೆ ಎಂದರೆ ಸರಿಯಲ್ಲ. ಮೃತ್ಯುಪತ್ರ ಮಾಡುವ ಸಮಯದಲ್ಲಿ ನಾನು ಹಾಜರಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಸವ್ವ ಇವರು ಎಂದಿಗೂ ಶಾಂತಪ್ಪ ಇವರ ಪರವಾಗಿ ಮೃತ್ಯುಪತ್ರವನ್ನು ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ ನಾನು ಹಾಗೂ ಶಾಂತಪ್ಪ ಮೊದಲಿಂದಲೂ ಆತ್ಮೀಯರು ಆದ್ದರಿಂದ ಅವರು ಬರೆದ ಮುಖ್ಯವಿಚಾರಣಾ ಪ್ರಮಾಣಪತ್ರಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ ನನ್ನ ಮುಖ್ಯವಿಚಾರಣಾ ಪ್ರಮಾಣಪತ್ರದಲ್ಲಿ ಬರೆದ ವಿಷಯಗಳೆಲ್ಲಾ ಸುಳ್ಳು ಎಂದರೆ ಸರಿಯಲ್ಲ

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.
ಹಾವೇರಿ.

ಪಿ.ಡಬ್ಲ್ಯೂಃ 2